ಕರ್ನಾಟಕ ಸರ್ಕಾರ

ಸಂಖ್ಯೆ: ಆಕುಕ 05 ಎಚ್ಎಸ್ಎಚ್ 2017

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:21.01.2017

**ಇವರಿಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ಬೆಂಗಳೂರು.

**ಇವರಿಗೆ:**

ಆಯುಕ್ತರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
ಆನಂದರಾವ್ ವೃತ್ತ, ಬೆಂಗಳೂರು.

**ಮಾನ್ಯರೆ,**

**ವಿಷಯ:** ಡಾ||ಸತೀಶ್, ತರಬೇತಿ ವೈದ್ಯರು, ಪ್ರಾಥಮಿಕ ಆರೋಗ್ಯ ಕೇಂದ್ರ, ಅಣದೂರ, ಬೀದರ್ ಇವರ ವೇತನ ಸ್ಪಷ್ಟೀಕರಣ ಕುರಿತು.

**ಉಲ್ಲೇಖ:** ತಮ್ಮ ಕಚೇರಿಯ ಪತ್ರ ಸಂಖ್ಯೆ:ಡಿ.ಹೆಚ್.ಎಸ್/ಬಿ.ಇ.ಸಿ/21/2016-17, ದಿನಾಂಕ:20.12.2016.

-*-*-*-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ:ಆಕುಕ 544 ಎಚ್ಎಸ್ಎಚ್ 2012, ದಿನಾಂಕ:19.7.2016ರಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಸ್ಪತ್ರೆ/ಕೇಂದ್ರಗಳಲ್ಲಿ ಕಡ್ಡಾಯ ಸೇವೆಗೆ ನೇಮಕವಾಗುವ ಸ್ನಾತಕೋತ್ತರ/ಡಿಪ್ಲೋಮಾ ಪದವೀದರರಿಗೆ ರೂ. 45,000/-(ನಲವತ್ತೈದು ಸಾವಿರಗಳು ಮಾತ್ರ)ಗಳು ಹಾಗೂ ಸೂಪರ್ ಸ್ಪೆಷಾಲಿಟಿ ಪದವೀದರರಿಗೆ ರೂ. 55,000/-(ರೂ. ಐವತ್ತೈದು ಸಾವಿರಗಳು ಮಾತ್ರ)ಗಳ ಮಾಸಿಕ ವೇತನವನ್ನು ನಿಗದಿಪಡಿಸಲಾಗಿದೆ. ಸದರಿ ವೇತನದಲ್ಲಿ ತುಟ್ಟಿ ಭತ್ಯೆ ಮತ್ತು ಮನೆ ಬಾಡಿಗೆ ಭತ್ಯೆಯೂ ಸೇರಿರುತ್ತದೆ.

ಅದರಂತೆ ಎಂಬಿಬಿಎಸ್ ವ್ಯಾಸಂಗ ಪೂರೈಸಿ ಕಡ್ಡಾಯ ಸೇವೆಗೆ ಸೇರುವ ವೈದ್ಯಾಧಿಕಾರಿಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗೆ ನೀಡುವ ವೇತನ ಶ್ರೇಣಿಯ ಕನಿಷ್ಠ ಮೂಲ ವೇತನ, ಅದರ ಮೇಲೆ ಕಾಲಕಾಲಕ್ಕೆ ಲಭ್ಯವಾಗುವ ತುಟ್ಟಿ ಭತ್ಯೆ ಮತ್ತು ಶೇಕಡ 10 ರಷ್ಟು ಮನೆ ಬಾಡಿಗೆ ಭತ್ಯೆಯನ್ನು ಸೇರಿಸಿ, ಸದರಿ ಒಟ್ಟು ವೇತನದಲ್ಲಿ ರೂ. 100/- ಗಳನ್ನು ಕಡಿತಗೊಳಿಸಿ ಪಾವತಿಸುವಂತೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

21/1/17

(ಟಿ.ಎಸ್. ನರಸಿಂಹರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ಸೇವೆಗಳು)
21/01